# ಕಲೆಯ ವಿರಾಟ್ ದರ್ಶನ!



**ನವಕರ್ನಾಟಕ ಪ್ರಕಾಶನ ಸಂಸ್ಥೆಗೆ ಈಗ ಚಿನ್ನದ ಹಬ್ಬದ ಸಡಗರ. ಕಳೆದ 50 ವರ್ಷಗಳಲ್ಲಿ 2,800ಕ್ಕೂ ಹೆಚ್ಚು ಪ್ರಕಟನೆ ಹೊರತಂದಿದೆ. ಇದುವರೆಗಿನ ಪ್ರಕಟನೆಗಳಲ್ಲಿ ಶಿಖರಪ್ರಾಯ ಎಂದರೆ ಕರ್ನಾಟಕದ ಕಲಾಪರಂಪರೆಯ ಇತಿಹಾಸ ಕಟ್ಟಿಕೊಡುವ 'ಕರ್ನಾಟಕ ಕಲಾದರ್ಶನ' ಎಂಬ ಎರಡು ಸಂಪುಟಗಳು; ಆಗಸ್ಟ್ ತಿಂಗಳಲ್ಲಿ ಇವು ಲೋಕಾರ್ಪಣೆಗೊಳ್ಳಲಿವೆ.**

■ ಗುಡಿಹಳ್ಳಿ ನಾಗರಾಜ

ರಾಜ ಮಹಾರಾಜರ ಬಹುಪರಾಕುಗಳಲ್ಲಿ ಜನಸಾಮಾನ್ಯರ ಇತಿಹಾಸ ಮೂಲೆಗುಂಪಾಗಿರುವುದು ಜಗಜ್ಜಾಹೀರವಾಗಿರುವ ಸಂಗತಿ. ರಿಯಲ್ ಎಸ್ಟೇಟ್ ಇರಬಹುದು, ಗಣಿ ಮಾಫಿಯಾ ಇರಬಹುದು– ಇಂದೂ ಕೂಡ ಪರಿಸ್ಥಿತಿ ಭಿನ್ನವೇನಲ್ಲ! ಆಳುವವರೂ ಅವರೇ, ಬರೆಸಿಕೊಳ್ಳುವವರೂ ಅವರೇ! ನಮ್ಮ ಇತಿಹಾಸ ಬರೆಯುವ ಮುಂದಿನ ಪೀಳಿಗೆಯೂ ಇಂತಹ ಬಹುಪರಾಕಿಗೆ ಶರಣು ಹೋಗುವರೇನೋ ಎನ್ನುವ ಆತಂಕ ಕಾಡುತ್ತಿದೆ.

ಕಲಾಲೋಕದ ಪರಿಸ್ಥಿತಿಯೂ ಹೆಚ್ಚು ಕಡಿಮೆ ಅದೇ ಆಗಿದೆ. ಚಿತ್ರಕಲೆ, ಶಿಲ್ಪಕಲೆ, ಛಾಯಾಚಿತ್ರ, ರಂಗಭೂಮಿ, ಸಂಗೀತ, ನೃತ್ಯ– ಮನುಷ್ಯನ ಅಂತರಂಗ ಉದ್ದೀಪನಗೊಳಿಸುವ ಸಾಧನಗಳು. ಅಂದಂದಿನ ಕಾಲಕ್ಕೆ ಅವು ಸರಿಯಾಗಿಯೇ ಬೆಳಗಿವೆ. ಇಂದೂ ಪ್ರಾಜ್ವಲಮಾನವಾಗಿಯೇ ಇವೆ. ಆದರೆ ಇಂತಹದೊಂದು ಕಲಾಲೋಕದ ಇತಿಹಾಸವನ್ನು ಕಾಲಾನುಕ್ರಮದಲ್ಲಿ ಕಟ್ಟಿಕೊಡುವ ಕೆಲಸ ಮಾತ್ರ ಇದೇ ಪ್ರಥಮ ಬಾರಿಗೆ ಎನ್ನುವಷ್ಟು ಬೃಹತ್ತಾಗಿ ನಡೆದಿದೆ. ನಾಡಿನ ಹೆಸರಾಂತ ನವಕರ್ನಾಟಕ ಪ್ರಕಾಶನದವರು ಕಳೆದ ನಾಲ್ಕೂವರೆ ವರ್ಷಗಳಿಂದ ನಡೆಸಿದ ಸಿದ್ಧತೆ ಇದೀಗ ನನಸಾಗುತ್ತಿದೆ. ಇದೇ ಆಗಸ್ಟ್ ತಿಂಗಳಿನಲ್ಲಿ ಒಟ್ಟು ಸಾವಿರದ ಇನ್ನೂರು ಪುಟಗಳ, 4,300 ಚಿತ್ರಗಳ ಅಂದವಾದ ವಿನ್ಯಾಸದೊಂದಿಗೆ ಎರಡು ಸಂಪುಟಗಳು ಬಿಡುಗಡೆಯಾಗಲಿವೆ.

ಕನ್ನಡ ಸಾಹಿತ್ಯಕ್ಕೆ ಒಂದೂವರೆ ಸಾವಿರ ವರ್ಷಗಳ ಶ್ರೀಮಂತ ಪರಂಪರೆ ಇದ್ದರೆ ಕಲಾಲೋಕಕ್ಕೆ ಎರಡು ಸಾವಿರ ವರ್ಷಗಳ ಪರಂಪರೆ ಇದೆ ಎನ್ನುತ್ತದೆ ಸಂಪಾದಕ ಮಂಡಲಿ. ಪ್ರೊ.ಎಂ.ಎಚ್.ಕೃಷ್ಣಯ್ಯ, ಡಾ.ವಿಜಯಾ ಹಾಗೂ ಸಿ.ಆರ್.ಕೃಷ್ಣರಾವ್ ಈ ಮಹಾತ್ವಾಕಾಂಕ್ಷೆ ಯೋಜನೆಯ ಸಂಪಾದಕರು. (ಎರಡು ವರ್ಷಗಳ ಹಿಂದೆ ನಿಧನರಾದ ಚಿ.ಶ್ರೀನಿವಾಸ ರಾಜು ಅವರೂ ಸಂಪಾದಕ ಮಂಡಲಿಯಲ್ಲಿದ್ದರು.) ಆಯಾ ಕ್ಷೇತ್ರಗಳ 55ಮಂದಿ ಪರಿಣತರು ತಮ್ಮ ಜೀವಮಾನದ ಶೋಧನೆಯ ಸಾರವನ್ನೇ ಇಲ್ಲಿ ಸಂಕ್ಷಿಪ್ತ ಲೇಖನಗಳಾಗಿ ಬರೆದುಕೊಟ್ಟಿದ್ದಾರೆ. ಚಿತ್ರಗಳನ್ನು ಒದಗಿಸಿದವರು ಹತ್ತಾರು ಮಂದಿ. ಪುಸ್ತಕದ ವಿನ್ಯಾಸ ಸೇರಿದಂತೆ ನೂರಾರು ಮಂದಿ ವ್ಯವಸ್ಥಾಪಕ ನಿರ್ದೇಶಕ ಕೆ.ಎಸ್.ರಾಜಾರಾಂ ಅವರ ಸಾರಥ್ಯದಲ್ಲಿ ಅಹರ್ನಿಶಿ ದುಡಿದಿದ್ದಾರೆ.




ಮೊದಲ ಸಂಪುಟದ ಭಿತ್ತಿ ಚಿತ್ರಕಲೆ ವಿಭಾಗದಲ್ಲಿ ಆ ಕಾಲದಲ್ಲೇ ಕರ್ನಾಟಕದ ವರ್ಣ ಶಿಲ್ಪಿಗಳು ಭಾರತ ದೇಶದ ಇತರರಿಗಿಂತ ಹೇಗೆ ಭಿನ್ನವಾಗಿ, ಸುಂದರವಾಗಿ ರಚಿಸಿದರು ಎನ್ನುವ ವಿಶ್ಲೇಷಣೆ ಇದೆ. ಭಾರತೀಯ ಶಿಲ್ಪಕಲೆಯಲ್ಲಿ ಕರ್ನಾಟಕದ ವಿಶಿಷ್ಟ ಸ್ಥಾನವನ್ನು ಶಿಲ್ಪಕಲೆ ವಿಭಾಗದ ಲೇಖನಗಳು ಶೋಧಿಸಿವೆ. 150 ವರ್ಷಗಳ ಇತಿಹಾಸದ ಛಾಯಾಚಿತ್ರಕಲೆ ಹೇಗೆ ಸಮಕಾಲೀನತೆಯ ದರ್ಶನ ಮಾಡಿತು ಎಂಬುದನ್ನು ಛಾಯಾಚಿತ್ರ ವಿಭಾಗದ ಚಿತ್ರ– ಬರಹಗಳು ಚಿತ್ರಿಸಿವೆ.

ದಕ್ಷಿಣಾದಿ, ಉತ್ತರಾದಿ ಎರಡೂ ಪ್ರಕಾರಗಳ ಶಾಸ್ತ್ರೀಯ ಸಂಗೀತ ಶಿಖರ ಸಾಧನೆ ಮಾಡಿರುವುದು ಕರ್ನಾಟಕದಲ್ಲಿ ಮಾತ್ರ. ಸಂಗೀತ ವಿಭಾಗದ ಲೇಖನಗಳು ಯಾವುದೇ ಉತ್ಪ್ರೇಕ್ಷೆಗೆ ಎಡೆ ಇಲ್ಲದಂತೆ ಸಾಧಾರ ಸಮೇತ ಈ ಅಂಶವನ್ನು ದೃಢಪಡಿಸಿವೆ. ಭರತನಾಟ್ಯದ ಜತೆ ಕೂಚಿಪುಡಿ, ಕಥಕ್, ಒಡಿಶಾ ಮುಂತಾದ ನೃತ್ಯ ಪದ್ಧತಿಗಳು ಹೆಚ್ಚು ಜನ ಮೆಚ್ಚುಗೆಗೆ ಪಾತ್ರವಾಗಿರುವುದು ಕರ್ನಾಟಕದಲ್ಲಿ ಎಂಬುದನ್ನು ನೃತ್ಯ ಕುರಿತ ಲೇಖನಗಳು ವಿವರಿಸಿವೆ. ವೃತ್ತಿ, ಹವ್ಯಾಸಿ, ಆಧುನಿಕ, ಜಾನಪದ ರಂಗಭೂಮಿ ಕುರಿತ ಲೇಖನಗಳು, ಚಲನಚಿತ್ರ ಕುರಿತ ಬರಹಗಳು– ಒಟ್ಟಾರೆಯಾಗಿ ಪ್ರದರ್ಶಕ ಕಲೆಗಳ ಇತಿಹಾಸವನ್ನು ಎರಡನೇ ಸಂಪುಟದ ಲೇಖನಗಳು ಕಣ್ಣಿಗೆ ಕಟ್ಟಿಕೊಟ್ಟಿವೆ.

ಇತಿಹಾಸದ ವಿವರಗಳ ಜತೆಗೆ, ವಿಶ್ಲೇಷಣೆ, ಒಳನೋಟ, ಆಯಾ ಕಲೆಗಳ ಬಗ್ಗೆ ಲೇಖಕರಿಗಿರುವ ಕಾಳಜಿ, ಪ್ರೀತಿಗಳು ಲೇಖನಗಳು ಸ್ವಾರಸ್ಯಕರವಾಗುವಂತೆ ಮಾಡಿವೆ. ಖ್ಯಾತ ಕಲಾವಿದ ಚಂದ್ರನಾಥ ಆಚಾರ್ಯ ಅವರ ವಿನ್ಯಾಸ ಪುಸ್ತಕಗಳನ್ನು ಅಂದಗೊಳಿಸಿವೆ. ಇಂತಹದೊಂದು ಭಾರಿ ಸಂಪುಟಗಳ ಮುಖಬೆಲೆ 3,000 ರೂ. ದೊಡ್ಡ ಮೊತ್ತವೇನಲ್ಲ. ಪ್ರಕಟಣಾ ಪೂರ್ವ ಬೆಲೆ ಇನ್ನೂ ಒಂದು ಸಾವಿರ ಕಡಿಮೆ, ಅಂದರೆ 2,000ರೂ. ಹಾಗೆ ಕೊಂಡವರಿಗೆ ಸಿಡಿ/ಡಿವಿಡಿ ಉಚಿತ. ■